ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : 114

೪ನೇ ವರ್ಷ ೩೧ನೇ ಸಂಚಿಕೆ ಕೊಪ್ಪ 18-2-1990 ಭಾನುವಾರ ಬೆಲೆ 60 ಪೈಸೆ

ಮಧ್ಯಾಂತರ ಮಂಡಲ ಚುನಾವಣೆಗಳು ರದ್ದು

ರಾಜ್ಯ ಸರ್ಕಾರಿ ನೌಕರರ ಅನಿರ್ದಿಷ್ಟ ಕಾಲದ ಮುಷ್ಕರದ ಕಾರಣ, ಫೆ. 25ರಂದು ರಾಜ್ಯಾದ್ಯಂತ ನಡೆಯಬೇಕಾಗಿದ್ದ ಎಲ್ಲಾ ಪುರಸಭೆ, ನಗರ ಪಾಲಿಕೆ, ಮಧ್ಯಂತರ ಮಂಡಲ ಪಂಚಾಯಿತ್ತಿಗಳ ಚುನಾವಣೆಗಳನ್ನೂ ಸರ್ಕಾರ ರದ್ದು ಮಾಡಿದೆ.

ರಾಜ್ಯದ 3 ವಿಧಾನ ಸಭಾ ಕ್ಷೇತ್ರಗಳಿಗೆ ಫೆ. 27ರಂದು ನಿಗದಿಯಾಗಿರುವ ಚುನಾವಣೆ ಮಾತ್ರ ನಡೆಯುತ್ತದೆ.

ಶೃಂಗೇರಿ, ಕೊಪ್ಪ, ನ.ರಾ.ಪುರ ಮಧ್ಯಾಂತರ ಮಂಡಲ ಪಂಚಾಯಿತ್ತಿಗಳೂ ಈ ರದ್ದಿನ ಬಿಸಿಗೆ ಈಡಾಗಿವೆ. ಇಲ್ಲೆಲ್ಲ ಈಗಾಗಲೇ ಚುನಾವಣೆಗೆ ನಾಮಪತ್ರ ಅಂಗೀಕಾರ ಮತ್ತು ಹಿಂತೆಗೆದುಕೊಳ್ಳುವಿಕೆ ಮುಗಿದು, ಅಂತಿಮ ಪಟ್ಟಿ ಕೂಡ ಪ್ರಕಟವಾಗಿತ್ತು.

ಕೊಪ್ಪದಲ್ಲಿ 46

ಕೊಪ್ಪದಲ್ಲಿ 22 ಜನ ನಾಮಪತ್ರ ವಾಪಸು ಪಡೆದು 46 ಜನ ಅಂತಿಮವಾಗಿ ಕಣದಲ್ಲಿ ಉಳಿದಿದ್ದರು. (1ನೇ ವಿಭಾಗದಿಂದ 14, 2-9, 3-6, 4-5, 5-10 ಮತ್ತು 6ನೇ ವಿಭಾಗದಿಂದ 2.)

ಗ್ರಾಮಾಂತರ ಪತ್ರಕರ್ತರಿಗೆ ತರಬೇತಿ ಶಿಬಿರ

ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಕರ್ನಾಟಕ ರಾಜ್ಯ ಪತ್ರಿಕಾ ಅಕಾಡೆಮಿ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಪತ್ರಕರ್ತರಿಗೆ ಒಂದು ವಾರ ಕಾಲದ ತರಬೇತಿ ಶಿಬಿರವನ್ನು ಮಾರ್ಚ್ 2ನೇ ವಾರದಲ್ಲಿ ಯೋಜಿಸಲಾಗಿದೆ.

ಈ ಶಿಬಿರದಲ್ಲಿ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಖ್ಯಾತಿಯ ಪತ್ರಕರ್ತರು ಪತ್ರಿಕೋದ್ಯಮದ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ.

ಈ ಶಿಬಿರದಲ್ಲಿ 30 ಮಂದಿ ಪತ್ರಕರ್ತರು ಭಾಗವಹಿಸಲು ಅವಕಾಶವಿದ್ದು ಜಿಲ್ಲೆಯ ಆಸಕ್ತ ಪತ್ರಕರ್ತರು ಫೆಬ್ರವರಿ 28ರ ಒಳಗೆ ತಮ್ಮ ಅರ್ಜಿಯನ್ನು ಜಿ. ವಿ. ಕೂಡನಾಥ ಅಯ್ಯರ್, ಅಧ್ಯಕ್ಷರು, ಜಿಲ್ಲಾ ಪತ್ರಕರ್ತರ ಸಂಘ, ಚಿಕ್ಕಮಗಳೂರು ಇವರಿಗೆ ಸಲ್ಲಿಸಬಹುದು. ಜಿಲ್ಲಾ ಸಂಘದ ಸದಸ್ಯತ್ವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

'ಉದ್ಧಟ' ಬ್ಯಾಂಕ್ ಮ್ಯಾನೇಜರ್ ವಿರುದ್ಧ ತನಿಖೆಗೆ ತಾ|| ಪಂಚಾಯಿತ್ತಿ ನಿರ್ಣಯ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಮರಿಯಪದ ಮರ್ಕಲ್ (ಕಿಗ್ಗ) ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಸೇತು ರಾಮ್ ಐ. ಆರ್. ಡಿ. ಪಿ. ಸಾಲ ಕೊಡುವ ವಿಚಾರದಲ್ಲಿ 'ಉದ್ಧಟತನ'ದಿಂದ ವರ್ತಿಸುತ್ತಿದ್ದಾರೆಂದು ಶಾಸಕ ಶಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ತಾ|| ಪಂಚಾಯಿತ್ತಿ ಸಮಿತಿ ಸಭೆ ನಿರ್ಣಯ ಮಾಡಿದೆ.

ಈ ಬಗ್ಗೆ ಕೇಳಲು ಹೋದ ಮಂಡಲ ಸದಸ್ಯರನ್ನು ಹೊರದೂಡಿಸುವ ಜಬರ್‌ದಸ್ತಿನೊಂದಿಗೆ ಅವರು ಪೋಲೀಸರಿಗೆ ದೂರು ನೀಡಿ ಕೇಸು ಹಾಕಿಸಿರುವುದನ್ನು ಸಭೆ ಖಂಡಿಸಿ, ಅವರ ವಿರುದ್ಧ ಬ್ಯಾಂಕಿನ ಮುಖ್ಯ ಕಛೇರಿಯಿಂದ ತನಿಖೆಯಾಗಬೇಕೆಂದು ಒತ್ತಾಯಿಸುವ ನಿರ್ಣಯ ಅಂಗೀಕರಿಸಿತು.

ಈ ಅಧಿಕಾರಿ ಲಂಚ ಪಡೆದು ಕೆಲಸ ಮಾಡುತ್ತಾರೆಂದು ವ್ಯಾಪಕ ದೂರು ಇರುವುದಾಗಿ ಅಣ್ಣಯ್ಯ ಹೆಗ್ಡೆ ದೂರಿದರು. ಅಲ್ಲದೆ, ಬ್ಯಾಂಕಿನಲ್ಲಿ ಕೊಡದೆ ಉಳಿದಿರುವ ಸಹಾಯ ಧನದ ಮೊತ್ತವನ್ನು ವಾಪಸು ಪಡೆಯಬೇಕೆಂದೂ ತಿಳಿಸಲಾಯಿತು.

ಮಂಡಲ ಪಂಚಾಯಿತ್ತಿಗಳು ಆರಿಸಿದ ಫಲಾನುಭವಿಗಳನ್ನು ಬದಲಿಸುವುದು, ಅವರಿಗೆ ಸಬ್ಸಿಡಿ ಹಣ ಮಾತ್ರ ಕೊಟ್ಟು ಉಳಿದ ಸಾಲದ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟುಕೊಂಡು, "ಸಾಧ್ಯವಾದರೆ ಕಟ್ಟು, ಇಲ್ಲದಿದ್ದರೆ ಬಿಡಿ" ಎಂದು ಹೇಳುವುದು, ಹೀಗೆ ಯೋಜನೆಯ ಮೂಲ ಉದ್ದೇಶವನ್ನೇ ತಿರುಚಿದ ಸಂದರ್ಭಗಳು ಗಮನಕ್ಕೆ ಬಂದಿದ್ದು, ಆ ಬಗ್ಗೆ ಸಮಗ್ರ ತನಿಖೆ ಮಾಡಬೇಕೆಂದೂ ನಿರ್ಣಯಿಸಲಾಯಿತು.

ಭೂಮಿಗಾಗಿ ಶೃಂಗೇರಿ ದ. ಸಂ. ಸ. ಚಳುವಳಿ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ : ರಾಜ್ಯ ದಲಿತ ಸಂಘರ್ಷ ಸಮಿತಿಯ ಕರೆಯಂತೆ ಈ ತಾಲ್ಲೂಕಿನ ಸುಮಾರು 500ಕ್ಕೂ ಹೆಚ್ಚು ದಲಿತರು ಮತ್ತು ಕಾರ್ಯಕರ್ತರು ಫೆ 12 ರಂದು 'ಬಗರ್‌ಹುಕುಂ ಭೂಮಿ ಬೇಕೇಬೇಕು' ಎಂಬ ಘೋಷಣೆಯೊಂದಿಗೆ ಪೇಟೆಯಲ್ಲಿ ಮೆರವಣಿಗೆ ನಡೆಸಿ, ತಹಸೀಲ್ದಾರ್ ಕಛೇರಿ ಮುಂದುಗಡೆ ಧರಣಿ ನಡೆಸಿದರು.

ಸ್ಥಳೀಯ ಬೇಡಿಕೆಗಳೂ ಸೇರಿ 12 ಬೇಡಿಕೆಗಳ ಮನವಿ ಪತ್ರವನ್ನು ತಹಸೀಲ್ದಾರ್‌ಗೆ ಸಲ್ಲಿಸಿ, ಆನಂತರ ತಾ|| ಸಂಚಾಲಕ ಕೆ. ಎಂ. ಗೋಪಾಲ್ ಈ ಬೇಡಿಕೆಗಳ ಅಗತ್ಯದ ಬಗ್ಗೆ ಮಾತನಾಡಿ, ಭೂಮಿಗಾಗಿ ಒತ್ತಾಯಿಸಿದರು.

1984ರ ವರೆಗಿನ ಅಕ್ರಮ ಸಾಗುವಳಿಯನ್ನು ಖಾಯಂಗೊಳಿಸುವ ಹಿಂದಿನ ಸರ್ಕಾರದ ಉದ್ದೇಶವನ್ನು ಬಳಸಿಕೊಂಡು ಹಿಂದಿನ ತಹಸೀಲ್ದಾರ್ ಪ್ರಭಾಕರ ಶರ್ಮ ಮುಂತಾದವರಿಂದ ಲಕ್ಷಾಂತರ ರೂ. ಕೊಡು ಸುಳ್ಳು ಸುಳ್ಳೇ ದಾಖಲೆಗಳನ್ನು ಸೃಷ್ಟಿಸಿಕೊಟ್ಟರು; ಆದರೆ ಹತ್ತಾರು ಜನ ದಲಿತರು ನಿಜವಾಗಿಯೂ ಬಗರ್ ಹುಕುಂ ಸಾಗುವಳಿ ಮಾಡಿದ್ದರೂ ಅಂಥ ಒಂದು ಪ್ರಕರಣದಲ್ಲೂ ಕಡತ ತಯಾರಿಸಲಿಲ್ಲ ಎಂದು ಆಪಾದಿಸಿದ ಕಲ್ಕುಳಿ ವಿಠಲ ಹೆಗ್ಡೆ, ಇಡೀ ತಾಲ್ಲೂಕಿನಲ್ಲಿ ದಲಿತರು ಶೇ. 2 ಕ್ಕಿಂತಲೂ ಕಡಿಮೆ ಭೂಮಿ ಹೊಂದಿರುವ ಸ್ಥಿತಿಯನ್ನು ತೋಡೆದು ಚರಿತ್ರೆ ಸೃಷ್ಟಿಸುವಂತೆ ಈಗಿನ ತಹಸೀಲ್ದಾರ್ ಜೋರೀಗೌಡರಿಗೆ ಕರೆಯಿತ್ತರು.

ಜೀತ ಪದ್ಧತಿ

ತಾಲ್ಲೂಕಿನಲ್ಲಿ ಇನ್ನೂ ಸಾಕಷ್ಟು ಜನ ಜೀತದಾಳುಗಳಿದ್ದಾರೆ. ಮಾದರಿಗೆ ಬೇಕಾದರೆ ಕಲ್ಕುಳಿಯಲ್ಲಿ ಇಂಥ ಪ್ರಕರಣಗಳನ್ನು ಖುದ್ದು ತಹಸೀಲ್ದಾರರೇ ಪರಿಶೀಲಿಸಲಿ ಎಂದು ಕೆ. ಎಂ. ಗೋಪಾಲ್ ಒತ್ತಾಯಿಸಿದರು.

ಶೃಂಗೇರಿ : ಕೃಷಿ ಕಾರ್ಮಿಕನ ಮನೆ ಪೂರ್ಣ ಭಸ್ಮ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಈ ತಾಲ್ಲೂಕಿನ ದೇವಸ್ಥೈಲು ಕೃಷ್ಣಪ್ಪ ಎಂಬವರ ಮನೆ ದನದಕೊಟ್ಟಿಗೆ ಈಚೆಗೆ ಭಸ್ಮವಾಗಿ ಒಂದು ಕರು ಸಜೀವ ದಹನಗೊಂಡಿತು. ಕೃಷ್ಣಪ್ಪ ಮತ್ತು ಕುಟುಂಬದವರ ಮೈ ಮೇಲಿನ ಬಟ್ಟೆ ಹೊರತು ಉಳಿದೆಲ್ಲ ಬಟ್ಟೆ, ಒಡವೆ-ವಸ್ತ್ರ, ಪಾತ್ರೆ, ಅಕ್ಕಿ-ಭತ್ತ ಇತ್ಯಾದಿ ಬೂದಿಯಾದವು. ಹುಡ್ಕೊ ಮನೆ ಸೇರಿದಂತೆ ಅಂದಾಜು 25 ಸಾವಿರ ರೂ. ನಷ್ಟವಾಗಿದೆ.

ನಿರ್ಗತಿಕರಾದ ಈ ಕೃಷಿ ಕಾರ್ಮಿಕ ಕುಟುಂಬಕ್ಕೆ ತಹಸೀಲ್ದಾರ್ 500 ರೂ. ಪರಿಹಾರದ ಭರವಸೆ ನೀಡಿದ್ದು, ಪುನಃ ಮನೆ ಕಟ್ಟಿಕೊಳ್ಳಲು ಹಂಚು - ನಾಟಿಗಳನ್ನು ಬಿಡಿಒ ಅವರೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿ ಅಥವಾ ಬೇರಾವುದೇ ನಿಧಿಯಿಂದ ನೆರವನ್ನು ಶಾಸಕರೂ ಕೊಡಿಸಬೇಕಾಗಿದೆ.

ನಾಟ ವಶ; ಜುಲ್ಮಾನೆ

ಕೊಪ್ಪ : ವಲಯ ಅರಣ್ಯಾಧಿಕಾರಿ ಶ್ರೀನಿವಾಸರಾವ್ ಮಾರ್ಗದರ್ಶನದಲ್ಲಿ ಗಾರ್ಡ್ ಭೋಜರಾಜ್, ಡ್ರೈವರ್ ಸೋಮಶೇಖರ್ ಮತ್ತು ವಾಚರ್‌ಗಳಾದ ರಮೇಶ್, ರುದ್ರಪ್ಪ ಇವರುಗಳು ಫೆ 10ರ ರಾತ್ರಿ 12 ಗಂಟೆ ಹೊತ್ತಿನಲ್ಲಿ ಗುಣವಂತೆ ಕಾಡಿನಿಂದ ಅಕ್ರಮವಾಗಿ ಹೊನ್ನೆ, ನಂದಿ ನಾಟಿಗಳನ್ನು ತಲೆ ಹೊರೆಯಲ್ಲಿ ಕಳ್ಳ ಸಾಗಣೆ ಮಾಡುತ್ತಿದ್ದ ವಿಲ್ಸನ್ ಮತ್ತು ಇತರ 7 ಜನರನ್ನು ಬಂಧಿಸಿ ಸುಮಾರು 5000 ರೂ. ಬೆಲೆಯ ನಾಟಾ ವಶಪಡಿಸಿಕೊಂಡಿದ್ದಾರೆ. ಅಪಾದಿತರಿಗೆ 1800 ರೂ. ದಂಡ ಹಾಕಲಾಯಿತು.

ನೌಕರರ ಮುಷ್ಕರ ಯಶಸ್ವಿ

ಕೊಪ್ಪ: ಕ್ಷೇತ್ರಾದ್ಯಂತ ರಾಜ್ಯ ಸರ್ಕಾರಿ ನೌಕರರ ಮುಷ್ಕರ ಬಹುತೇಕ ಸಂಪೂರ್ಣವಾಗಿದೆ. ಪೋಲೀಸ್ ಇಲಾಖೆ ಹಾಗೂ ಆಸ್ಪತ್ರೆಯ ಕೆಲ ವಿಭಾಗಗಳನ್ನುಳಿದು ಮಿಕ್ಕೆಲ್ಲ ಕಛೇರಿಗಳೂ ಖಾಲಿಯಾಗಿವೆ; ಶಾಲೆಗಳು ಮುಚ್ಚಿವೆ.

ರಾಮಪ್ಪಯ್ಯ ಅವರ ಜಿಲ್ಲಾ ಪರಿಷತ್ ಸದಸ್ಯತ್ವ ರದ್ದು

ಶೃಂಗೇರಿ : ಇಲ್ಲಿನ ಜಿಲ್ಲಾ ಪರಿಷತ್ ಸದಸ್ಯ ಕೆ. ವಿ. ರಾಮಪ್ಪಯ್ಯ ಅವರ ಜಿ. ಪ. ಸದಸ್ಯತ್ವ ಅನೂರ್ಜಿತವಾಗಿಲ್ಲವೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಜ. 2 ರಂದು ತೀರ್ಪು ನೀಡಿದ್ದಾರೆ.

ರಾಮಪ್ಪಯ್ಯ ಅವರು ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ತಮ್ಮದೇ (ಕಾಂಗ್ರೆಸ್) ಪಕ್ಷದ ಅಧಿಕೃತ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸಿದ್ದರಿಂದಾಗಿ 'ಪಕ್ಷಾಂತರ ನಿಷೇಧ ಕಾಯಿದೆ' ಕಲಂ 3 (1) ರ ಅನ್ವಯ ಅವರ ಜಿ. ಪ. ಸದಸ್ಯತ್ವವನ್ನು ಅನೂರ್ಜಿತಗೊಳಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು 22-12-89 ರಂದು ಸಲ್ಲಿಸಿದ್ದ ಅರ್ಜಿಯನ್ನು ಈ ತೀರ್ಪಿನೊಂದಿಗೆ ಮುಖ್ಯ ಕಾರ್ಯದರ್ಶಿಗಳು ವಜಾ ಮಾಡಿದ್ದಾರೆ.

(ವರದಿ : ಸಾ ವಸ್ತ)

ಮಂಡೇಲಾ ಬಿಡುಗಡೆ : ವಿಶ್ವದ ಸ್ವಾತಂತ್ರ್ಯ ಹೋರಾಟಗಳ ಚರಿತ್ರೆಯಲ್ಲೊಂದು ಮೈಲಿಗಲ್ಲು

ಜಗತ್ತಿನಾದ್ಯಂತದ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆಯಾದ, ದಕ್ಷಿಣ ಆಫ್ರಿಕದ ಸ್ವಾತಂತ್ರ್ಯ ಹೋರಾಟದ ಅದಮ್ಯ ಚೇತನ ಡಾ|| ನೆಲ್ಸನ್ ಮಂಡೇಲಾ 27 ವರ್ಷಗಳಷ್ಟು ಸುದೀರ್ಘ ಜೈಲುವಾಸದಿಂದ ಇದೀಗ ಫೆ. 11 ರಂದು ಬಿಡುಗಡೆಯಾಗಿದ್ದಾರೆ

ಸ್ವಾತಂತ್ರ್ಯ, ಸಮಾನತೆ, ನ್ಯಾಯಗಳಿಗಾಗಿ ವಿಶ್ವಾದ್ಯಂತ ನಡೆದಿರುವ ಅಥವಾ ನಡೆಯುತ್ತಿರುವ ಹೋರಾಟಗಳ ಚರಿತ್ರೆಯಲ್ಲಿ ಇದೊಂದು ಸ್ಪಷ್ಟ ಮೈಲಿಗಲ್ಲು ಎಂಬುದರಲ್ಲಿ ಸಂಶಯವಿಲ್ಲ.

ದಕ್ಷಿಣ ಆಫ್ರಿಕ ಮತ್ತು ವರ್ಣ ಭೇದ

ಆಫ್ರಿಕ ಖಂಡದ ನೈರುತ್ಯ ತುದಿಯಲ್ಲಿರುವ ಪುಟ್ಟ ದೇಶವೇ ದಕ್ಷಿಣ ಆಫ್ರಿಕ. ಪ್ರಿಟೋರಿಯ ಇದರ ರಾಜಧಾನಿ. ಸುಮಾರು ನಮ್ಮ ಕೇರಳ ರಾಜ್ಯದಷ್ಟು ವಿಸ್ತೀರ್ಣ ಹಾಗೂ ಎಂಟೂ ಮುಕ್ಕಾಲು ಕೋಟಿಗೂ ಕಮ್ಮಿ ಜನಸಂಖ್ಯೆಯುಳ್ಳ ಈ ದೇಶ ಕೃಷಿ, ಅರಣ್ಯ ಮತ್ತು ಖನಿಜ ಸಂಪತ್ತಿನ ಖನಿ. ಯೂರೋಪಿನ ಕೈಗಾರಿಕಾ ಕ್ರಾಂತಿಯ ನಂತರ ಅಲ್ಲಿನ ಬಿಳಿಯ ಜನಾಂಗ ಇಲ್ಲಿಗೆ ಬಂದು ನೆಲೆಸಿ, ಇಲ್ಲಿನ ಸಮಸ್ತ ಸಂಪನ್ಮೂಲಗಳ ಒಡೆತನವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.

ಅನಂತರ ಸ್ಥಳೀಯ ಜನತೆಯ ಮೇಲೆ ತಮ್ಮ ರಾಜಕೀಯ ಅಧಿಕಾರವನ್ನು ಬಿಗಿಗೊಳಿಸುತ್ತಾ ಕ್ರಮೇಣ ನಾಗರಿಕ ಜನಾಂಗ ಕಂಡು-ಕೇಳರಿಯದಂಥ ಅಮಾನುಷವಾದ 'ಅಪಾರ್ಥೆಯ್ಡ್' ಎಂಬ ಹೆಸರಿನ ವರ್ಣ ಭೇದದ ಕಾನೂನುಗಳನ್ನು ರಚಿಸಿ ಕ್ರೂರ ದಬ್ಬಾಳಿಕೆ ನಡೆಸುತ್ತ ಬಂದರು. ಇಂದು ಜನಸಂಖ್ಯೆಯ ಶೇ 2 ರಷ್ಟಕ್ಕಿಂತ ಕಮ್ಮಿಯಿರುವ ಸುಮಾರು 5 ಲಕ್ಷ ಬಿಳಿಯರು 2 ಕೋಟಿ 60 ಲಕ್ಷ ಆಫ್ರಿಕನ್ನರನ್ನು ತುಳಿದು ಆಳುತ್ತಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ಹೋರಾಟ

ಕರಿಯರ ಮೇಲಿನ ಈ ದಮನಕಾರಿ, ವರ್ಣ ಭೇದ ಆಡಳಿತದ ವಿರುದ್ಧ ಜನತೆಯ ಪ್ರತಿಭಟನೆ, ಸ್ವಾತಂತ್ರ್ಯಕ್ಕಾಗಿ ಹೋರಾಟ ಸುಮಾರು 90 ವರ್ಷಗಳ ಹಿಂದೆ ಆರಂಭವಾಯಿತು. ಅನಂತರ ಹೋರಾಟ ನಡೆಸುತ್ತಿದ್ದ ನಾನಾ ಗುಂಪುಗಳು ಒಂದುಗೂಡಿ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ಎಎನ್‌ಸಿ) ರಚಿತವಾಯಿತು. ಮೊದಲಿಗೆ ಶಾಂತಿಯುತವಾಗಿದ್ದ ಹೋರಾಟವನ್ನು ದಮನ ಮಾಡಲು ಪ್ರಭುತ್ವ ಹೆಚ್ಚು ಹೆಚ್ಚು ಹಿಂಸೆ ಬಳಸತೊಡಗಿದಂತೆ, ಹೋರಾಟವೂ ಹೆಚ್ಚೆಚ್ಚು ಉಗ್ರ ಹಾಗೂ ಹಿಂಸಾತ್ಮಕವಾಗುತ್ತ, 1961 ರಿಂದ ಸಶಸ್ತ್ರ ಹೋರಾಟವನ್ನೂ ಒಳಗೊಂಡು ಬೆಳೆದಿದೆ.

ಮಂಡೇಲಾ: ಬುಡಕಟ್ಟಿನಿಂದ ಪ್ರಪಂಚದೆತ್ತರಕ್ಕೆ

ದೇಶದ ಆಗ್ನೇಯ ಭಾಗದಲ್ಲಿರುವ ಟ್ರಾನ್ಸ್‌ಕೆಇ ಪ್ರಾಂತ್ಯದ ಕ್ಯುನು ಎಂಬ ಪುಟ್ಟ ಪಟ್ಟಣದಲ್ಲಿ, ಸ್ಥಳೀಯ 'ತೆಂಬು' ಜನಾಂಗದ ಮುಖಂಡನ ಮಗನಾಗಿ 1918 ಜುಲೈ 18ರಂದು ಹುಟ್ಟಿದ ರೋಲಿಹ್ಲಾಹ್ಲಾ ನೆಲ್ಸನ್ ಮಂಡೇಲಾ, ತಾನೂ ಒಬ್ಬ ಬುಡಕಟ್ಟು ನಾಯಕನಾಗಿ, ಆ ಮಟ್ಟಿಗೆ 'ರಾಜ'ನಂತೆ ಜೀವಿಸಬಹುದಾಗಿದ್ದವರು. ಆದರೆ ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ಅನ್ಯಾಯ, ದಬ್ಬಾಳಿಕೆ, ದಾಸ್ಯಗಳ ವಿರುದ್ಧ ಧ್ವನಿ ಎತ್ತಿದ ಅವರು ಇಂದು ಇಡೀ ಪ್ರಪಂಚದ ಎಲ್ಲ ಸ್ವಾತಂತ್ರ್ಯ ಪ್ರಿಯರ ಹೃದಯ ಸಿಂಹಾಸನದ 'ಅಧಿಪತಿ'ಯಾಗಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ

1938 ರಲ್ಲಿ ಫೋರ್ಟ್ ಹೇರ್ ವಿಶ್ವವಿದ್ಯಾಲಯದಲ್ಲಿದ್ದಾಗಲೇ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಉಚ್ಚಾಟಿಸಲ್ಪಟ್ಟ ಅವರು, ಅನಂತರ ಜೋಹಾನ್ಸ್‌ಬರ್ಗ್‌ನಲ್ಲಿ ಅಂಚೆ ಶಿಕ್ಷಣದಲ್ಲಿ ಪದವಿ ಪಡೆದು, 1941ರಲ್ಲಿ ಕಾನೂನು ವ್ಯಾಸಂಗಕ್ಕೆ ಸೇರಿದರು.

ಈ ವೇಳೆಗಾಗಲೇ ತನ್ನ ತಾಯ್ನಾಡಿನ ದಾಸ್ಯ ಕಿತ್ತೊಗೆಯುವ ಬಗ್ಗೆ ಅವರ ನಿಲುವು—ನಿರ್ಧಾರಗಳು ಸ್ಪಷ್ಟ ರೂಪು ಪಡೆಯುತ್ತಿದ್ದು, 1944ರಲ್ಲಿ ಅವರು ಆಲಿವರ್ ಟ್ಯಾಂಬೊ ಮತ್ತು ವಾಲ್ಟರ್ ಸಿಸುಲು ಜೊತೆ ಸೇರಿ ಎಎನ್‌ಸಿಯ ಯುವರಂಗವನ್ನು ಸ್ಥಾಪಿಸುವುದರೊಂದಿಗೆ ಸ್ವಾತಂತ್ರ್ಯ ಹೋರಾಟವೇ ಅವರ ಬದುಕಿನ ಮಾರ್ಗವಾಯಿತು

ಮೆಟ್ಟಿಲುಗಳು

1948ರಲ್ಲಿ ಯುವ ವಿಭಾಗದ ಕಾರ್ಯದರ್ಶಿ, 50ರಲ್ಲಿ ಅದರ ಅಧ್ಯಕ್ಷರೂ ಆದ ಮಂಡೇಲಾ, 1952ರಲ್ಲಿ ಎಎನ್‌ಸಿ ದೇಶಾದ್ಯಂತ ಸಂಘಟಿಸಿದ ಕಾನೂನು ಭಂಗ ಚಳುವಳಿಯ 'ಪ್ರಧಾನ ಸ್ವಯಂ ಸೇವಕ'ರಾಗಿ ದೇಶಾದ್ಯಂತ ಸಂಚರಿಸಿ, ಅಪಾರ್ಥೆಯ್ಡ್ ಕಾನೂನುಗಳನ್ನು ಮುರಿಯುವ ಹೋರಾಟಕ್ಕೆ ಸ್ವಯಂ ಸೇವಕರನ್ನು ಭರ್ತಿ ಮಾಡಿದರು. ಕರ್ಫ್ಯೂ ನಿಯಮಗಳನ್ನು ಮುರಿದ ಆಪಾದನೆಯ ಮೇಲೆ ಇತರ 51 ಜನರೊಡನೆ ಬಂಧಿತರಾದರು.

ಅದೇ ವರ್ಷ ಆಲಿವರ್ ಟ್ಯಾಂಬೊ ಜೊತೆಗೂಡಿ ವಕೀಲಿ ವೃತ್ತಿ ಆರಂಭಿಸಿದರು. ದೇಶದಲ್ಲಿ ಇದು ಕಪ್ಪು ಜನಾಂಗದ ಪ್ರಪ್ರಥಮ ವಕೀಲ ಜೋಡಿಯಾಗಿತ್ತು. ಅದೇ ವರ್ಷ 'ಕಮ್ಯುನಿಸಂ ನಿಗ್ರಹ ಕಾಯ್ದೆ'ಯಡಿ ಇನ್ನಿತರರೊಡನೆ ಬಂಧಿಸಲ್ಪಟ್ಟ ಮಂಡೇಲಾ, ಸಭೆಗಳಲ್ಲಿ ಭಾಗವಹಿಸದಂತೆ ಹಾಗೂ ಜೋಹಾನ್ಸ್‌ಬರ್ಗ್ ಬಿಟ್ಟು ಹೋಗದಂತೆ ನಿರ್ಬಂಧಿಸಲ್ಪಟ್ಟರು.

1953ರಲ್ಲಿ ಈ ನಿರ್ಬಂಧಗಳನ್ನು ಪುನಃ ವಿಸ್ತರಿಸಿ, ಅವರು ಅಧಿಕೃತವಾಗಿ ಎಎನ್‌ಸಿಗೆ ರಾಜೀನಾಮೆ ಕೊಡುವಂತೆ ಮಾಡಲಾಯಿತು. ಅನಂತರ ಅವರ ನಾಯಕತ್ವ ಗುಪ್ತವಾಗಿ ಮುಂದುವರಿಯಿತು. 1956ರಲ್ಲಿ 'ಉನ್ನತ ಮಟ್ಟದ ದೇಶದ್ರೋಹಿ ಕೃತ್ಯ'ಕ್ಕಾಗಿ ಬಂಧಿಸಲ್ಪಟ್ಟ 156 ಜನ ರಾಜಕೀಯ ನಾಯಕರಲ್ಲಿ ಮಂಡೇಲಾ ಅವರೂ ಒಬ್ಬರಾಗಿದ್ದರು

1958ರ ಜೂನ್‌ನಲ್ಲಿ ತಮ್ಮ ಮೊದಲ ಪತ್ನಿ ಎವೆಲಿನ್'ಗೆ ವಿಚ್ಛೇದನ ನೀಡಿದ ಮಂಡೇಲಾ 24 ವರ್ಷದ ಸಾಮಾಜಿಕ ಕಾರ್ಯಕರ್ತೆ ವಿನ್ನಿ ನೊಮ್ಜಾಮೊ ಮಡಿಕಿಝೇಲಾರನ್ನು ಮದುವೆಯಾದರು. ಆಗ ಅವರಿಗೆ 40 ವರ್ಷ ವಯಸ್ಸು. (3ನೇ ಪುಟಕ್ಕೆ)

ಪದ್ಯದಂಗಣ

ನಿನಗಾಗಿ ಕಾಯುತ್ತಿದ್ದೆ

ಓ ನನ್ನ ಪ್ರಿಯೆ,
ನೀನು ಬರುತ್ತೀಯ ಎಂದು
ನಾನು ನಿನಗಾಗಿ ಕಾಯುತ್ತಿದ್ದೆ.
ಮಾಗಿಗೆ ಸೆರೆ ಸಿಕ್ಕ
ಆಕಾಶ ಮಲ್ಲಿಗೆ
ಬಿಕ್ಕುತ್ತಿರುವಾಗ
ನಾನು ನಿನಗಾಗಿ ಕಾಯುತ್ತಿದ್ದೆ.
ಅಂಗಳದ ಶ್ಯಾವಂತಿಗೆ,
ಮಲ್ಲಿಗೆ ಹೂ ಬಿಟ್ಟಿರುವಾಗ
ದಾಪುಗಾಲಿಟ್ಟು ಬರುವ
ಓ ನನ್ನ ಪ್ರಿಯೆ,
ನಿನಗಾಗಿ ಕಾಯುತ್ತಿದ್ದೆ.
ಅರೆ ಬೆತ್ತಲ ಮನಸ್ಸಿಗೆ
ಪೂರ್ಣ ಹುಚ್ಚು. ಬೇಡಿದರೂ
ಕೇಳಲಿಲ್ಲ ನೀ, ಬರುವ ದಾರಿ
ಮುಚ್ಚಿ ಬಿಟ್ಟಿತು.
ನಾ ಇನ್ನಾರಿಗಾಗಿ ಕಾಯಲಿ?
ಓ ನನ್ನ ಪ್ರಿಯೆ
ನೀನು ಬರುತ್ತೀಯಾ....?

—ಬಿ.ವಿ. ಕುಮಾರ್

ಎಸ್ಸೆಸ್ಸೆಲ್ಸಿ ಪರೀಕ್ಷಾರ್ಥಿಗಳಿಗಾಗಿ ಜೀವಶಾಸ್ತ್ರ ಪ್ರಶ್ನೆಗಳು ಮತ್ತು ಉತ್ತರಗಳು:

● ಕೆ. ಎಸ್. ರಾಮಕೃಷ್ಣ ಉಡುಪ.

[ಹರಿಹರಪುರ ಅ. ರಾ. ಸ. ಪ್ರೌಢಶಾಲೆಯಲ್ಲಿ 27 ವರ್ಷ ಅಧ್ಯಾಪಕರಾಗಿದ್ದು ಈಚೆಗೆ ನಿವೃತ್ತರಾದ ಶ್ರೀ ಕೆ.ಎಸ್.ಆರ್. ಉಡುಪ ಅವರು ಎಸ್ಸೆಸ್ಸೆಲ್ಸಿ ಪರೀಕ್ಷಾರ್ಥಿಗಳಿಗಾಗಿ ಸಂಕ್ಷಿಪ್ತ ಉತ್ತರದ ಮಾದರಿ ಪ್ರಶ್ನೋತ್ತರಗಳನ್ನು ಸಿದ್ಧಪಡಿಸಿದ್ದಾರೆ. ಇವುಗಳನ್ನು 4 ಅಥವಾ 5 ಕಂತುಗಳಲ್ಲಿ ಪ್ರಕಟಿಸುತ್ತೇವೆ. —ಸಂ.]

1. ಪ್ರಶ್ನೆ : ಎರಡು ವಿಧ ಸಾಗಾಣಿಕಾ ವ್ಯೂಹಗಳಾವುವು? ಒಂದೊಂದು ಉದಾಹರಣೆ ಕೊಡಿ (2)

ಉತ್ತರ :
ಎ) ತೆರೆದ ಸಾಗಾಣಿಕಾ ವ್ಯೂಹ. ಉದಾ : ಜಿರಲೆ ($\frac{1}{2}+\frac{1}{2}$)
ಬಿ) ಮುಚ್ಚಿದ ಸಾಗಾಣಿಕಾ ವ್ಯೂಹ. ಉದಾ : ಎರೆಹುಳು ($\frac{1}{2}+\frac{1}{2}$)

2 ರಕ್ತ ಒತ್ತಡ ಎಂದರೇನು? ಅದನ್ನು ಅಳೆಯಲು ಬಳಸುವ ಉಪಕರಣವನ್ನು ಹೆಸರಿಸಿ. ($1+\frac{1}{2}$)
ಉ : ಅಪಧಮನಿಗಳಲ್ಲಿ ಹರಿಯುವ ರಕ್ತ ಅದರ ಗೋಡೆಯ ಮೇಲೆ ಹಾಕುವ ಒತ್ತಡವೇ ರಕ್ತ ಒತ್ತಡ. ಉಪಕರಣ : ಸ್ಪಿಗ್ಮೊಮಾನೋಮೀಟರ್.

3 ಲ್ಯೂಕೇಮಿಯ ಎಂದರೇನು? (1)
ಉ : ಸೋಂಕು ಇಲ್ಲದೆ ಬಿಳಿ ರಕ್ತ ಕಣಗಳ ಸಂಖ್ಯೆ ಅತ್ಯಧಿಕವಾಗುವುದಕ್ಕೆ ಲ್ಯೂಕೇಮಿಯ ಎಂದು ಹೆಸರು.

4. ಜಿರಲೆಯ ರಕ್ತ ಉಸಿರಾಟದಲ್ಲಿ ಭಾಗವಹಿಸದಿರಲು ಕಾರಣವೇನು? (1)
ಉ : ಜಿರಲೆ ರಕ್ತದಲ್ಲಿ ಹೀಮೊಗ್ಲೋಬಿನ್ (ಬಣ್ಣದ ಶ್ವಸನದ ವಸ್ತು) ಇಲ್ಲ.

5. ವಿಸರ್ಜನೆ ಎಂದರೇನು? (1)
ಉ : ಶರೀರದ ಚಯಾಪಚಯ ಕ್ರಿಯೆಯಲ್ಲಿ ಉಂಟಾಗುವ ತ್ಯಾಜ್ಯ ವಸ್ತುಗಳನ್ನು ಹೊರ ಸಾಗಿಸುವ ಕ್ರಿಯೆಯೆ ವಿಸರ್ಜನೆ.

6. ಸಾರಜನಕ ಯುಕ್ತ ತಾಜ್ಯ ವಸ್ತುಗಳಾವುವು? ($1\frac{1}{2}$)
ಉ : ಅಮೋನಿಯ, ಯೂರಿಯ, ಯೂರಿಕ್ ಆಮ್ಲ.

7. ಮೂತ್ರೋತ್ಪತ್ತಿಯ ಮೂರು ಹಂತಗಳಾವುವು? ($1\frac{1}{2}$)
ಉ : ಚಯನಾತ್ಮಕ ಶೋಧಿಸುವಿಕೆ, ಕ್ರಿಯಾತ್ಮಕ ಸಾಗಾಣಿಕೆ ಮತ್ತು ಸೂಕ್ಷ್ಮನಾಳಗಳಿಂದ ವಿಸರ್ಜನೆ.

8. ಇವುಗಳನ್ನು ಹೆಸರಿಸಿ : ($2\frac{1}{2}$)
ಎ) ರಕ್ತ ಪರಿಚಲನೆಯನ್ನು ಕಂಡು ಹಿಡಿದವನು
ಬಿ) ರಕ್ತ ಹೆಪ್ಪುಗಟ್ಟಲು ಸಹಾಯಕವಾದ ಪ್ರೊಟೀನ್
ಸಿ) ಎರೆ ಹುಳುವಿನ ವಿಸರ್ಜನಾಂಗ
ಡಿ) ಚರ್ಮದ ಬಣ್ಣಕ್ಕೆ ಕಾರಣವಾದ ವಸ್ತು
ಇ) ಬೌಮನ್ನನ ಕೋಶದಲ್ಲಿರುವ ರಕ್ತದ ಲೋಮನಾಳಗಳ ಗೊಂಚಲು.

ಉ : ಎ) ವಿಲಿಯಂ ಹಾರ್ವೆ ಬಿ) ಫೈಬ್ರಿನೋಜನ್
ಸಿ) ನೆಫ್ರಿಡಿಯ ಡಿ) ಮೆಲನಿನ್ ಇ) ಗ್ಲಾಮೆರುಲಸ್

(ಮುಂದುವರಿಯುವುದು)

ಮಂಡೇಲಾ ಬಿಡುಗಡೆ

(2ನೇ ಪುಟದಿಂದ)

1960ರ ಮಾರ್ಚ್‌ನಲ್ಲಿ ಶಾರ್ಪ್‌ವಿಲ್ಲೆ ಎಂಬಲ್ಲಿ 69 ಜನ ಪ್ರತಿಭಟನಾಕಾರರು ಪೋಲೀಸರಿಂದ ಹತರಾದ ಬಳಿಕ ತುರ್ತು ಪರಿಸ್ಥಿತಿ ಘೋಷಿಸಿ, ಎಎನ್‌ಸಿ ಯನ್ನು ಕಾನೂನು ಬಾಹಿರ ಸಂಘಟನೆಯೆಂದು ಸರ್ಕಾರ ಘೋಷಿಸಿತು ಇದೇ ವೇಳೆಗೆ 'ದೇಶದ್ರೋಹ'ದ ಪ್ರಕರಣದ ವಿಚಾರಣೆ ಆರಂಭವಾಗಿ 1 ವರ್ಷ ನಡೆದು 1961ರ ಮಾರ್ಚ್‌ನಲ್ಲಿ ಮಂಡೇಲಾ ಅವರೊಂದಿಗೆ ಎಲ್ಲ ಆಪಾದಿತರ ಖುಲಾಸೆಯಾಯಿತು. ವಿಚಾರಣೆಯಲ್ಲಿ ಮಂಡೇಲಾ ಅವರೂ ವಾದ ಮಾಡಿದರು.

ದಂಡನಾಯಕ

ನಂತರದ ಒಂದೂವರೆ ವರ್ಷ ದೇಶಾದ್ಯಂತ ಸುತ್ತಾಡಿದ ಮಂಡೇಲಾ, 'ರಾಷ್ಟ್ರದ ಈಟಿ' ಎಂಬ ಹೆಸರಿನ ಎಎನ್‌ಸಿಯ ನೂತನ ಮಿಲಿಟರಿ ಘಟಕದ ಮೊದಲ ದಂಡನಾಯಕರಾದರು. ಭೂಗತರಾಗಿದ್ದುಕೊಂಡೇ 1961ರ ಮೇ ತಿಂಗಳಲ್ಲಿ ರಾಷ್ಟ್ರಮಟ್ಟದ ಮುಷ್ಕರವೊಂದನ್ನು ಸಂಘಟಿಸುವಲ್ಲಿ ಮುಖ್ಯ ಪಾತ್ರ ವಹಿಸಿದರು.

1952 ಜನವರಿಯಲ್ಲಿ ಇಥಿಯೋಪಿಯದಲ್ಲಿ ಆಫ್ರಿಕದ ಎಲ್ಲ ದೇಶಗಳ ಸ್ವಾತಂತ್ರ್ಯ ಚಳುವಳಿಗಳ ಉನ್ನತ ಸಮಾವೇಶದಲ್ಲಿ ಪ್ರತ್ಯಕ್ಷರಾಗಿ ಎಲ್ಲರನ್ನೂ ಚಕಿತಗೊಳಿಸಿದರು ಅಲ್ಲಿಂದ ಗೆರಿಲ್ಲಾ ತರಬೇತಿಗಾಗಿ ಅಲ್ಜೀರಿಯಕ್ಕೂ ಅನಂತರ ...ದ ಸಂಧಿಯ ನಾಯಕರ ಭೇಟಿಗಾಗಿ ಲಂಡನ್ನಿಗೂ ಹೋದರು.

ಸೆರೆ, ಜೈಲು

ಪುನಃ ಗುಪ್ತವಾಗಿ ದೇಶದೊಳಕ್ಕೆ ನುಸುಳಿಕೊಂಡ ಕೆಲವೇ ವಾರಗಳಲ್ಲಿ 1962ರ ಆಗಸ್ಟ್ 5 ರಂದು ಮಂಡೇಲಾರನ್ನು ಬಂಧಿಸಿ, ಅಕ್ರಮವಾಗಿ ದೇಶದಿಂದ ಹೊರ ಹೋದುದು ಹಾಗೂ ಹಿಂಸೆಗೆ ಪ್ರಚೋದನೆ ಎಂಬ ಆಪಾದನೆಗಳ ಮೇಲೆ ... ವರ್ಷದ ಜೈಲು ಶಿಕ್ಷೆ ವಿಧಿಸಲಾಯಿತು.

1963 ರ ಜುಲೈಯಲ್ಲಿ ರಿವೋನಿಯದ ಎಎನ್‌ಸಿಯ ಗುಪ್ತ ಕೇಂದ್ರ ನೆಲೆಯ ಮೇಲೆ ದಾಳಿ ಮಾಡಿದ ಪೋಲೀಸರು, ...ತ ಗೆರಿಲ್ಲಾ ಆಂದೋಳನದ ರೂಪುರೇಷೆಗಳನ್ನೊಳಗೊಂಡ ದಸ್ತಾವೇಜುಗಳನ್ನು ವಶಪಡಿಸಿಕೊಂಡು, ಮಂಡೇಲಾ ... ಇತರ 8 ಮಂದಿ ನಾಯಕರ ಮೇಲೆ ಬುಡಮೇಲು ಕೃತ್ಯ ಮತ್ತು ಸರ್ಕಾರವನ್ನು ಕಿತ್ತೊಗೆಯುವ ಸಂಚಿನ ಆಪಾದನೆ ಹೊರಿಸಿ ಮೊಕದ್ದಮೆ ಹೂಡಿದರು

ಐತಿಹಾಸಿಕ ಗರ್ಜನೆ

'ರಿವೋನಿಯ ವಿಚಾರಣೆ' ಎಂದು ಖ್ಯಾತ... ಈ ಪ್ರಕರಣದ ಕೊನೆಯ ಹಂತ ...ಪಿಸುತ್ತಿದ್ದಂತೆ 1964ರ ಜೂನ್ 20 ... ನ್ಯಾಯಾಲಯದ ಕಟಕಟೆಯಲ್ಲಿ ... ಐತಿಹಾಸಿಕವಾದ, ಇಂದಿಗೂ ಪ್ರಸಿದ್ಧವಾಗಿ ಉಳಿದಿರುವ ಭಾಷಣ ... ಹೇಳಿಕೆ ನೀಡಿದರು. (ವಿಶೇಷ... ಮೊನ್ನೆ ಜೈಲಿನಿಂದ ಬಿಡುಗಡೆ... ...ತರ ಫೆ 12 ರಂದು ಸುಮಾರು ... ಜನಸ್ತೋಮವನ್ನುದ್ದೇಶಿಸಿ ಅವರು ...ನ ಭಾಷಣದ ಕೊನೆಗೆ ಇದೇ ಮಾತು ... ಪುನರುಚ್ಚರಿಸಿದರು !)

... ಭಾಷಣವಲ್ಲ, ಹೇಳಿಕೆಯಲ್ಲಿ, ...ದು ಐತಿಹಾಸಿಕ ಗರ್ಜನೆ. "ನನ್ನ ...ನ ಈ ಎಲ್ಲ ಚಟುವಟಿಕೆಗಳಿಗೆ ಈ ದೇಶದಲ್ಲಿನ ನನ್ನ ಅನುಭವವೇ ಕಾರಣ. ಕೇವಲ ಹುಚ್ಚು ಆವೇಶಕ್ಕಾಗಿ ಅಥವಾ ಹಿಂಸೆಯ ಮೇಲಿನ ಪ್ರೀತಿಯಿಂದ ನಾನು ಈ ಮಾರ್ಗ ಹಿಡಿದಿಲ್ಲ ನನ್ನ ಜೀವಿತವನ್ನು ಆಫ್ರಿಕದ ಜನತೆಯ ಈ ಹೋರಾಟಕ್ಕಾಗಿ ಮುಡಿಪು ಇಟ್ಟಿದ್ದೇನೆ; ಬಿಳಿಯರ ಸರ್ವಾಧಿಕಾರದ ವಿರುದ್ಧ ಹೋರಾಡಿದ್ದೇನೆ. ಎಲ್ಲರೂ ಸೌಹಾರ್ದತೆಯಿಂದ ಬದುಕಬಲ್ಲ, ಎಲ್ಲರಿಗೂ ಸಮಾನ ಅವಕಾಶಗಳುಳ್ಳ, ಮುಕ್ತ ಮತ್ತು ಪ್ರಜಾಪ್ರಭುತ್ವವಿರುವ ದಕ್ಷಿಣ ಆಫ್ರಿಕ ದೇಶವೇ ನನ್ನ ಗುರಿ. ಈ ಧ್ಯೇಯ ಸಾಧನೆಯಾಗುವುದನ್ನು ಕಾಣುವುದಕ್ಕೆ ನನಗೆ ಆಸೆಯಿದೆ. ಆದರೆ, ಅಗತ್ಯ ಬಿದ್ದಲ್ಲಿ ಈ ಧ್ಯೇಯ ಸಾಧನೆಗಾಗಿ ನಾನು ಮಡಿಯಲೂ ಸಿದ್ಧ !"

ಆರು ದಶಕಗಳ ಕಾಲ ಅಹಿಂಸಾಪರ ಸಂಘಟನೆಯಾಗಿದ್ದ ಎಎನ್‌ಸಿ ಹಿಂಸೆಯ ಕಡೆ ತಿರುಗಬೇಕಾಗಿ ಬಂದ ಸಂದರ್ಭವನ್ನು ಅವರು ಇದರಲ್ಲಿ ವಿವರಿಸಿದರು. ಆದರೆ ಮಂಡೇಲಾ ಸಹಿತ ಎಂಟು ಮಂದಿಗೆ ಜೀವಾವಧಿ ಜೈಲು ಶಿಕ್ಷೆ ವಿಧಿಸಲಾಯಿತು. ಅಂದೇ ರಾತ್ರಿ ಅವರನ್ನು ರಾಬಿನ್ ದ್ವೀಪದ ಸೆರೆಮನೆಗೆ ಸಾಗಿಸಲಾಯಿತು. ಅಲ್ಲಿ ಅವರು ಮುಂದಿನ 18 ವರ್ಷಗಳನ್ನು ಕಳೆದರು.

ಮುಂದುವರಿದ ಹೋರಾಟ

ಇತ್ತ ದೇಶಾದ್ಯಂತ ಸ್ವಾತಂತ್ರ್ಯ ಹೋರಾಟ ಕಾವೇರುತ್ತಲೇ ನಡೆಯಿತು. 1976 ರಲ್ಲಿ ಕರಿಯರ ಆಧಿಕ್ಯವುಳ್ಳ ಸೊವೆಟೊ ಪ್ರಾಂತ್ಯದಲ್ಲಿ ಬೃಹತ್ ದಂಗೆ ನಡೆದು, ಬಿಳಿಯ ಸರ್ಕಾರ ಪೋಲಿಸ ಮತ್ತು ಮಿಲಿಟರಿ ಬಳಸಿ ಲಕ್ಷಾಂತರ ಜನರನ್ನು ಆಹುತಿ ತೆಗೆದುಕೊಂಡಿತು. ಮಂಡೇಲಾರ ಪತ್ನಿ ವಿನ್ನಿಯನ್ನು ಗಡೀಪಾರು ಮಾಡಿ, ದೇಶದ ಮೂಲೆಯೊಂದರಲ್ಲಿ 7 ವರ್ಷ ಸೆರೆಯಲ್ಲಿಟ್ಟರು.

ಆವರೆ 'ಮಂಡೇಲಾ ಬಿಡುಗಡೆ'ಗಾಗಿ ವಿಶ್ವಾದ್ಯಂತ ಆಂದೋಲನ ನಡೆದು, 1980ರ ಜೂನ್ 13 ರಂದು ವಿಶ್ವಸಂಸ್ಥೆ ಭದ್ರತಾ ಮಂಡಳಿ ಕೂಡ ಅದೇ ರೀತಿಯ ನಿರ್ಣಯವೊಂದನ್ನು ಅಂಗೀಕರಿಸುವಂತಾಯಿತು. 1982 ರಲ್ಲಿ ಮಂಡೇಲಾ ಮತ್ತು ಸಿಸುಲುರನ್ನು ಬೇರೆ ಸೆರೆಮನೆಗೆ ವರ್ಗಾಯಿಸಲಾಯಿತು. ಮಂಡೇಲಾ ಮತ್ತು ವಿನ್ನಿ ಭೇಟಿಗೆ, ಪರಸ್ಪರ ಆಲಿಂಗನಕ್ಕೆ 22 ಸುದೀರ್ಘ ವರ್ಷಗಳ ನಂತರ, 1984ರ ಮೇ 12 ರಂದು ಮೊತ್ತ ಮೊದಲ ಬಾರಿಗೆ ಅವಕಾಶ ಸಿಕ್ಕಿತು.

"ವರ್ಣಭೇದ ಕಾನೂನು ಅಳಿಯದೆ ಹಿಂಸೆ ತ್ಯಾಗ ಇಲ್ಲ"

ಹಿಂಸೆ ತ್ಯಜಿಸುವುದಾದರೆ ಮಂಡೇಲಾರನ್ನು ಬಿಡುಗಡೆ ಮಾಡುವುದಾಗಿ 1985ರ ಜನವರಿಯಲ್ಲಿ ಅಧ್ಯಕ್ಷ ಪಿಕ್ ಬೋಥಾ ಹೇಳಿದ್ದಕ್ಕೆ, ಸರ್ಕಾರ ಅಪಾರ್ಥೆಯ್ಡ್ ರದ್ದುಪಡಿಸಿ, ಕರಿಯರಿಗೆ ಪೂರ್ಣ ರಾಜಕೀಯ ಹಕ್ಕುಗಳನ್ನು ನೀಡುವವರೆಗೂ ಹಿಂಸೆಯನ್ನು ತ್ಯಜಿಸುವುದು ಸಾಧ್ಯವಿಲ್ಲವೆಂದು ಮಂಡೇಲಾ ದೃಢವಾಗಿ ಘೋಷಿಸಿದರು. ಅದೇ ನವೆಂಬರ್‌ನಲ್ಲಿ ಅವರಿಗೆ ಪ್ರೊಸ್ಟೇಟ್ ಗ್ರಂಥಿಯ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಅವರ ಆರೋಗ್ಯ ಸುಧಾರಣೆಗಾಗಿ 3 ವಾರ ಆಸ್ಪತ್ರೆಯಲ್ಲಿದ್ದುದು ಅವರ ಬಿಡುಗಡೆಯಾಗಬಹುದೆಂಬ ಊಹೆಗಳಿಗೆ ಇಂಬುಗೊಟ್ಟಿತು. ಆದರೂ ಬಿಡುಗಡೆಯಾಗಲಿಲ್ಲ.

1988ರ ಜುಲೈ 18 ರಂದು ಇಡೀ ವಿಶ್ವ ಮಂಡೇಲಾರ 70ನೇ ಜನ್ಮ ದಿನ ಆಚರಿಸಿತು. ದ. ಆಫ್ರಿಕದಲ್ಲಿ ಬಹುಶೇಕ ಸಮಾರಂಭಗಳನ್ನು ನಿರ್ಬಂಧಿಸಲಾಯಿತು. ಅದೇ ಆಗಸ್ಟ್‌ನಲ್ಲಿ ಮಂಡೇಲಾರಿಗೆ ಕ್ಷಯ ರೋಗ ಕಾಣಿಸಿಕೊಂಡು ಆಸ್ಪತ್ರೆಗೆ ದಾಖಲಿಸಲಾಯಿತು. ಸ್ವಲ್ಪ ಸುಧಾರಿಸಿದ ನಂತರ ಅವರನ್ನು ಕೇಪ್ ಟೌನಿನ ಪಾರ್ಲ್‌ನಲ್ಲಿರುವ ವಿಕ್ಟರ್ ವೆರ್ಸ್‌ಟರ್ ಸೆರೆಮನೆಯಲ್ಲಿನ ಸುಸಜ್ಜಿತ ಮನೆಗೆ ಸ್ಥಳಾಂತರಿಸಲಾಯಿತು. ಅವರ ಕುಟುಂಬ ವರ್ಗದವರಿಗೆ ಮುಕ್ತ ಭೇಟಿಗೆ ಅವಕಾಶ ಕಲ್ಪಿಸಲಾಯಿತು. ಅದೇ ವರ್ಷದ ಕ್ರಿಸ್‌ಮಸ್ ಒಳಗಾಗಿ, ಅವರ ನಾಲ್ವರು ಸಂಗಾತಿಗಳೂ ಅವರನ್ನು ಭೇಟಿಯಾದರು

ಸಂಧಾನದ ಹಾದಿ

1989ರ ಜುಲೈ 5 ರಂದು ಬೋಥಾ ತಮ್ಮ ಅಧಿಕೃತ ನಿವಾಸದಲ್ಲಿ ಮಂಡೇಲಾ ಜೊತೆ 45 ನಿಮಿಷ ಚರ್ಚಿಸುವುದರೊಂದಿಗೆ ಸಂಧಾನದ ಹಾದಿ ತೆರೆಯಿತು. ಬೋಥಾರ ನಂತರ ಆಗಸ್ಟ್‌ನಲ್ಲಿ ಅಧಿಕಾರಕ್ಕೆ ಬಂದ ಫ್ರೆಡರಿಕ್ ಡಿ ಕ್ಲರ್ಕ್ ಅವರು ಅಕ್ಟೋಬರ್ 15 ರಂದು ಸಿಸುಲು ಮತ್ತು ಇತರ ನಾಲ್ವರು ನಾಯಕರನ್ನು ಬೇಷರತ್ತಾಗಿ ಬಿಡುಗಡೆ ಮಾಡಿದರು. ಡಿ. 13 ರಂದು ಮಂಡೇಲಾ ಜೊತೆಗೂ ಚರ್ಚಿಸಿದರು

1990ರ ಫೆ. 2 ರಂದು ಎಎನ್‌ಸಿ ಮತ್ತು ಇತರ 60 ಸಂಘಟನೆಗಳ ಮೇಲಿನ ನಿರ್ಬಂಧ ತೆಗೆದು ಹಾಕಿ ಮಾನ್ಯತೆ ನೀಡಲಾಯಿತು. ಎಲ್ಲಾ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡುವುದಾಗಿ ಸಾರಿದ ಡೆಕ್ಲರ್ಕ್, 374 ಮಂದಿ ರಾಜಕೀಯ ವ್ಯಕ್ತಿಗಳ ಮೇಲಿನ ನಿರ್ಬಂಧವನ್ನೂ ತೆಗೆದು ಹಾಕಿ, ದೇಶದಲ್ಲಿ ಗಲ್ಲು ಶಿಕ್ಷೆಯ ಮೇಲೆ ತಡೆ ವಿಧಿಸಿದರು.

1990 ರ ಫೆಬ್ರವರಿ 11 ರಂದು ಮಂಡೇಲಾ, ತಮ್ಮ ಬದುಕಿನ ಅಮೂಲ್ಯ ಅವಧಿಯ 27 ವರ್ಷಗಳನ್ನು ಬಂಧನದಲ್ಲಿ ಕಳೆದು ದೈಹಿಕವಾಗಿ ಜರ್ಝರಿತರಾಗಿಯೂ, ಮಾನಸಿಕ–ನೈತಿಕವಾಗಿ ಅಜೇಯರಾಗಿ, ದೇಶದ ಸ್ವಾತಂತ್ರ್ಯದ ಮುಂಬೆಳಕಿನೊತ್ತು, ವಿಕ್ಟರ್ ವೆರ್ಸ್ಟರ್ ಜೈಲುಮನೆಯಿಂದ ಹೊರ ಬಂದರು.

ಹೋರಾಟಕ್ಕೆ ಹೊಸ ದಿಕ್ಕು, ಹೊಸ ಚೈತನ್ಯ

ಮಂಡೇಲಾರ ಬಿಡುಗಡೆ ದಕ್ಷಿಣ ಆಫ್ರಿಕದ ಕರಿಯರಿಗೆ ಸ್ವಾತಂತ್ರ್ಯವನ್ನೇನೂ ನೀಡಿಲ್ಲ. ಆದರೆ ಆ ದಿಕ್ಕಿನ ಅವರ ಹೋರಾಟಕ್ಕೆ ಹೊಸ ಸ್ಫೂರ್ತಿ, ಹೊಸ ಆಯಾಮವನ್ನು ಒದಗಿಸಿದೆ. ದೇಶಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆಯುವವರೆಗೂ ಗೆರಿಲ್ಲಾ ಹೋರಾಟ ನಿಲ್ಲುವುದಿಲ್ಲವೆಂದು ಸಾರಿರುವ ಮಂಡೇಲಾ, ಅಷ್ಟೇ ಜವಾಬ್ದಾರಿಯಿಂದ, ಕರಿಯ–ಬಿಳಿಯರೆಲ್ಲರಿಗೂ ಸಮಾನ ಬದುಕಿನ ಭವಿಷ್ಯದ ಕುರಿತು ಮಾತಾಡಿದ್ದಾರೆ.

ಮನುಷ್ಯನ ಜ್ಞಾನ-ಬುದ್ಧಿಗಳು ದಿಗಂತದಷ್ಟು ವಿಸ್ತಾರವಾಗಿ ಬೆಳೆದಿರುವ ಈ ಯುಗದಲ್ಲೂ, ಇನ್ನೂ ವರ್ಣ ಭೇದಕ್ಕೇ ಅಂಟಿಕೊಳ್ಳಬೇಕೆಂಬ ಹುಚ್ಚು ಆಗ್ರಹ ಹೊಂದಿರುವ ನವ ಫ್ಯಾಸಿಸ್ಟ್ ಶಕ್ತಿಗಳು ವಿಶ್ವದ ಅತಿ ಮುಂದುವರಿದ ಜನಾಂಗಗಳಲ್ಲೊಂದಾದ ಬಿಳಿಯರಲ್ಲಿ ಇನ್ನೂ ಬೇರೂರಿರುವ ವಿಪರ್ಯಾಸ ಕಾಣುತ್ತದೆ. 'ಮಂಡೇಲಾರನ್ನು ಗಲ್ಲಿಗೇರಿಸಿ' ಎಂದು ಈ ಶಕ್ತಿಗಳು ಬೊಬ್ಬಿಡುತ್ತಿವೆ.

ಇತ್ತ ಕರಿಯರಲ್ಲೂ ವಿವಿಧ ಗುಂಪು, ಬುಡಕಟ್ಟುಗಳಿವೆ; ವಿವಿಧ ಆಲೋಚನೆಗಳಿವೆ. ಆದರೆ ಇವೆಲ್ಲವನ್ನೂ ಸರಿತೂಗಿಸಿ, ಬಿಳಿಯರಲ್ಲಿ ಕಡೆಗೂ ವಿವೇಕ ಮೂಡಿಸಿ, ದೇಶವನ್ನು ಸ್ವಾತಂತ್ರ್ಯ, ಸಮಾನತೆ, ಪ್ರಜಾತಂತ್ರಗಳತ್ತ ಕೊಂಡೊಯ್ಯಬಲ್ಲರೆಂದು ಮಂಡೇಲಾರತ್ತ ಇಡೀ ವಿಶ್ವ ಭರವಸೆಯ ದೃಷ್ಟಿ ನೆಟ್ಟಿದೆ.

ಇತ್ತ ನಾವೂ ಇದ್ದೇವೆ—ಭಾರತೀಯರು; ಆತ್ಮ ಘಾತುಕರು, ಆಷಾಢಭೂತಿಗಳು ! ದಕ್ಷಿಣ ಆಫ್ರಿಕದ ವರ್ಣಭೇದದ ವಿರುದ್ಧ ಉಗ್ರವಾದ ಮಾತಾಡುತ್ತಲೇ ನಮ್ಮದೇ ಜನಾಂಗದೊಳಗೆ ಅಸ್ಪೃಶ್ಯತೆಯನ್ನು ಅನಿವಾರ್ಯವೆಂದು ಸಮರ್ಥಿಸುತ್ತಲೂ, ಇನ್ನೊಂದು ಗುಂಪಿಗೆ ಪೂಜಾಸ್ಥಳಗಳ ಸ್ವಾತಂತ್ರ್ಯ ನಿರಾಕರಿಸುತ್ತಲೂ, ದೇವರ–ಧರ್ಮದ ಹೆಸರಲ್ಲಿ ಲಕ್ಷಾಂತರ ಮುಗ್ಧ ಸಹಮಾನವರ ಮಾರಣ ಹೋಮಕ್ಕೆ ದಿಗ್ವಿಜಯ ಹೂಡಿದ್ದೇವೆ ಅದಕ್ಕೆ ಎಷ್ಟು ನೆಪ, ಎಷ್ಟು ಸಮರ್ಥನೆ, ನೂರೆಂಟು 'ಪಾಶ್ಚಿತ್ಯಧಾರ' 'ಶಾಸ್ತ್ರಾಧಾರ'ಗಳು !

ಮಂಡೇಲಾ ಎಂಬ ಮಾನವ ಸ್ವಾತಂತ್ರ್ಯದ ಈ ಸಂಕೇತವನ್ನು ದ. ಆಫ್ರಿಕ ಸರ್ಕಾರ ಬಿಡುಗಡೆ ಮಾಡಲೇಬೇಕಾಗಿ ಬಂದ ಅನಿವಾರ್ಯತೆಯಾದರೂ ನಮ್ಮ ಹೃದಯ ತಟ್ಟಿ ಈ ಆಷಾಢಭೂತಿತನದ ಮುಸುಕು ಸರಿಸೀತೆ ?

(ಸಾಧಾರ)

ಜಿಲ್ಲೆಯ ಪರಿಸರ ಸಮಸ್ಯೆಗಳ ಪರಿಹಾರ ಕುರಿತು ಸಮಾಲೋಚನಾ ಸಭೆ

ಕೊಪ್ಪ: ಭದ್ರಾ ಮೇಲ್ದಂಡೆ ಯೋಜನೆ, ಕುದುರೆಮುಖ ಮಾಲಿನ್ಯ, ಸಿ ಮತ್ತು ಡಿ ಭೂಮಿ ಸಮಸ್ಯೆ, ಸೊಪ್ಪಿನ ಬೆಟ್ಟ, ಗುಬ್ಬಿಗದ್ದೆ ಕಾಡಿನಂಥ ಅಕ್ರಮಗಳ ಮೂಲಕ ಕಾಡಿನ ನಾಶ, ಸಣ್ಣ ಹಳ್ಳ–ಚಿಕ್ಕ ಕೆರೆಗಳ ಸಮಸ್ಯೆಗಳು— ಇವೇ ಮುಂತಾದ ಪರಿಸರ ಹಾಗೂ ಜನಜೀವನಕ್ಕೆ ನೇರ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಜಿಲ್ಲೆಯ ಸಂಸತ್ ಸದಸ್ಯರು, ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿ.ಪ. ಅಧ್ಯಕ್ಷರು ಹಾಗೂ ಇತರ ಜನ ಪ್ರತಿನಿಧಿಗಳ ಜೊತೆ **"ಜಿಲ್ಲೆಯ ಪರಿಸರ ಸಮಸ್ಯೆಗಳ ಪರಿಹಾರ ಸಮಾಲೋಚನಾ ಸಭೆ"** ತಾ 20-2-90ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಛೇರಿ ಎದುರಿನ (ಜಿಲ್ಲಾ ಮೈದಾನ) ನೆಹರು ಯುವ ಕೇಂದ್ರದಲ್ಲಿ ನಡೆಯಲಿದೆ.

ಇಂಥ ಸಮಸ್ಯೆಗಳಿಂದ ಸಣ್ಣ–ಸಣ್ಣಗೇ ನ್ನ ಅನುಭವಿಸುತ್ತಿರುವ ರೈತರು, ಸಾರ್ವಜನಿಕರು ಹಾಗೂ ಪರಿಸರಾಸಕ್ತರು ಈ ಸಭೆಯಲ್ಲಿ ತಪ್ಪದೆ ಭಾಗವಹಿಸಬೇಕೆಂದು ಸಭೆಯ ವ್ಯವಸ್ಥೆ ಮಾಡಿರುವ ಜಿಲ್ಲಾ ಮತ್ತು ಕೊಪ್ಪ ತಾ॥ ಪರಿಸರ ಜಾಗೃತಿ ವೇದಿಕೆಗಳು ಕೋರಿವೆ.

ಓದುಗರ ಪತ್ರಗಳು

ಕೃತಜ್ಞತೆ

ಪ್ರಿಯರೆ,

ತಾ. 9-2-1990 ರಂದು ಹರಿಹರ ಪುರದ ಅ. ರಾ. ಸ. ಪದವಿ ಪೂರ್ವ ಕಾಲೇಜಿನ ಮಕ್ಕಳು ನನ್ನನ್ನು ಅಶ್ರೀಯುವಾಗಿ ಸನ್ಮಾನಿಸಿ ಬೀಳ್ಕೊಟ್ಟಿರುವುದಕ್ಕೆ ಅವರಿಗೆ ನಾನು ಕೃತಜ್ಞನಾಗಿದ್ದೇನೆ ಹಾಗೂ ಅವರೆಲ್ಲರಿಗೆ ಶುಭ ಹಾರೈಸುತ್ತೇನೆ.

ಈ ಸಂದರ್ಭದಲ್ಲಿ ಅವರೊಂದಿಗೆ ಸಹಕರಿಸಿದ ಆಡಳಿತ ಸಮಿತಿಯ ಮಾನ್ಯ ಸದಸ್ಯರಿಗೂ ಮತ್ತು ನನ್ನ ಸಹೋದ್ಯೋಗಿ ಮಿತ್ರರಿಗೂ ನನ್ನ ಅನಂತ ವಂದನೆಗಳು.

—ಕೆ.ಎಸ್. ರಾಮಕೃಷ್ಣ ಉಡುಪ, ಹರಿಹರಪುರ.

"ಹಾಲ್ಮುತ್ತೂರು ಹೆಗ್ಗೆರೆ ನೀರಾವರಿ ಕೆರೆಯೇ ಹೌದು; ತೂಬಿಗೆ ಬೆಣೆ ಹಾಕುವುದು ಬುಡಮೇಲು ಕೃತ್ಯ"

ಪ್ರಿಯರೆ,

ತಮ್ಮ 11-2-90 ರ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಹಾಲ್ಮುತ್ತೂರಿನ ಹೆಗ್ಗೆರೆ ತೂಬಿನ ಕೆರೆಯಲ್ಲ' ಎಂಬ ಪ್ರತಿಕ್ರಿಯೆ ಅಧಿಕಾರಿಗಳನ್ನೂ, ಜನಪ್ರತಿನಿಧಿಗಳನ್ನೂ, ಸಾರ್ವಜನಿಕರನ್ನೂ ದಾರಿ ತಪ್ಪಿಸುವ ಹೇಳಿಕೆ.

ಈ ಕೆರೆ ನಿರ್ಮಾಣದಲ್ಲೇ ಒಂದು ಕೆಸರು ತೂಬು, ಒಂದು ಮುಖ್ಯ ತೂಬು ಹಾಗೂ ದಂಡೆಯ ಮೂಲೆಯಲ್ಲೊಂದು ತೂಬು— ಹೀಗೆ ಮೂರು ತೂಬುಗಳನ್ನು ನಿರ್ಮಿಸಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಕೆರೆಗಳಿಗೆ ಎರಡೇ ತೂಬಿರುತ್ತದಷ್ಟೆ. ಈ 3 ರಲ್ಲಿ ಕೊನೆಯ ತೂಬನ್ನು ಈಗಾಗಲೇ ಮುಚ್ಚಿಸಿದ್ದಾರೆ. ಹೀಗೆ 3 ತೂಬುಗಳನ್ನು ಇಟ್ಟಿರುವ ಉದ್ದೇಶ ಜಮೀನುಗಳಿಗೆ ನೀರು ಹಾಯಿಸಲೆಂಬುದೇ ತಾನೇ?

ಕೆರೆಯ ಕೆಳಗಿನ ಜಮೀನುಗಳು ತೂಬಿನ ಕಾಲುವೆ ಕಡೆಗೆ ಇಳಿಜಾರಾಗಿರಲು ಕಾರಣ ಭೂಮಾಲಕರು ಮಳೆಗಾಲದಲ್ಲಿ ಜೌಗು ಬಸಿದುಹೋಗಲು ಮಾಡಿಕೊಂಡ ಏರ್ಪಾಡು ಅಷ್ಟೆ. ಅದಕ್ಕಾಗಿ ಬೇರೆಯವರು ಏಕೆ ಬೆಲೆ ತೆರಬೇಕು? (ಈಗಲೂ ಅದನ್ನು ಎತ್ತರ ಮಾಡಿಕೊಂಡು ಅಥವಾ ಕಾಲುವೆಗೆ ಕಟ್ಟು ಹಾಕಿ ನೀರು ಹಾಯಿಸಬಹುದು)

ಕೆರೆಯಿಂದ ನೀರು ಬಿಟ್ಟರೂ, ಕೆಸರು ತೂಬಿನವರೆಗೆ ಐದಾರು ಅಡಿ ನೀರು ನಿಂತೇ ಇರುತ್ತೆ. ಆದ್ದರಿಂದ ಯಾವ "ಜೌಗಿಗೂ ತೊಂದರೆಯಾಗುವುದಿಲ್ಲ. ಅಲ್ಲದೆ, ಜೌಗಿನ 'ನೀರು' ಎಂದಿರುವುದು ಕೆರೆಗೇ ಹೊರತು ಜಮೀನಿಗಲ್ಲ.

ಈ ಕೆರೆಯ ನೀರನ್ನು ಜಮೀನಿಗೆ ಹಾಯಿಸಿದರೆ ಬಾವಿಗೆ ಜಲ, ಜಾನುವಾರಿಗೆ ಕುಡಿವ ನೀರು ಇಲ್ಲವಾಗುತ್ತದೆಂಬ ಹೇಳಿಕೆಗೂ ಅರ್ಥವಿಲ್ಲ. ಬಾವಿಗಳನ್ನು ಅಂತರ್‌ಜಲದ ಮೂಲ ನೋಡಿ ತೋಡಿಸುತ್ತಾರೆಯೇ ಹೊರತು ಯಾರೂ ಕೆರೆ ಅಥವಾ ಹೊಳೆಯ ಜಲ ಸಿಗುತ್ತದೆಂದು ನೆಚ್ಚಿ ಬಾವಿ ತೋಡಿಸುವುದಿಲ್ಲ ಅಲ್ಲವೆ?

ಜಾನುವಾರುಗಳ ಕುಡಿವ ನೀರಿಗೂ ಈ ಊರಿನಲ್ಲಿ ಕೊರತೆಯಿಲ್ಲ. ಹೊಳೆಯಷ್ಟು ದೊಡ್ಡದಾದ ಬಾಗಿಹಳ್ಳ ಹತ್ತಿರವೇ ಇದೆ. ನಿಜವಾಗಿಯೂ ಇದು ಜಾನುವಾರುಗಳ ಕುಡಿವ ನೀರಿಗೆ ಶಾಶ್ವತ ಆಶ್ರಯವಾಗಿದೆ. ಇದಲ್ಲದೆ ಊರಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸಾರ್ವಜನಿಕ ತೆರೆದ ಬಾವಿಗಳು, ಖಾಸಗಿ ಬಾವಿಗಳು, 3 ಬೋರ್‌ವೆಲ್‌ಗಳು, ಇನ್ನೂ ಸಾಲದೆಂದರೆ ಗ್ರಾಮಾಂತರ ನೀರು ಸರಬರಾಜು ಯೋಜನೆಯ ನಲ್ಲಿ ವ್ಯವಸ್ಥೆ ಇದೆ. ಜಾನುವಾರು ಸಾಕಿದವರಿಗೆ ಅವಕ್ಕೆ ನೀರುಣಿಸಲು ಇಷ್ಟು ಸಾಲದೆ? ಇಷ್ಟೂ ಅಲ್ಲದೆ, ಕೆರೆಯಲ್ಲಿ ಕೂಡ ಕೆಸರು ತೂಬಿನ ಕೆಳಗಿನ ಐದಾರು ಅಡಿ ನೀರೂ ಅವಕ್ಕೆ ಸಿಗುತ್ತೆ.

ಅರ್ಧ-ಮುಕ್ಕಾಲು ಎಕರೆಯಲ್ಲಿ ತೋಟ ಮಾಡಿಕೊಂಡಿರುವವರೂ ಜಮೀನಿಗೆ ನೀರು ಬಯಸಿದರೆ ತಪ್ಪೇನು? ಇದಕ್ಕಾಗಿ ಹೆಚ್ಚು ಜಮೀನು 'ಉಳ್ಳವರ' ಅಟ್ಟಹಾಸ, ತಾತ್ಸಾರದ ಹೇಳಿಕೆ ಅಗತ್ಯವಿಲ್ಲದ್ದು.

ಕಳಕಳಿ ಬಗ್ಗೆ ಹೇಳುವುದಾದರೆ, ಕೆರೆಯ ಮೇಲ್ಭಾಗದಲ್ಲಿ ಯಾರೂ ದರ್ಖಾಸ್ತು ಮಾಡಬಾರದೆಂಬುದು ಪೂರ್ವಿಕರ ತಿಳುವಳಿಕೆಪೂರ್ಣ ಸಂಪ್ರದಾಯವಾಗಿರುವಾಗ, ಈ ಕೆರೆಯ ಮೇಲ್ಭಾಗ ಪೂರ್ತಿ ದರ್ಖಾಸ್ತು ಮಾಡಿ, ಸುತ್ತ ಅಗಳು ಹೊಡೆಸಿ ಗುಡ್ಡದ ನೀರನ್ನೆಲ್ಲ ಕೆರೆಗೆ ಬಿಟ್ಟಿರುವುದು, ತಮ್ಮ ಸಹಾಯಿತ್ತು ಅಧ್ಯಕ್ಷಗಿರಿಯ ದರ್ಬಾರಿನಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗೆ ಮೋರಿ ಮಾಡಿಸಿ ಆ ಕಡೆಯಿಂದಲೂ ಗುಡ್ಡದ ನೀರನ್ನೆಲ್ಲ ಕೆರೆಗೆ ಬಿಟ್ಟಿರುವುದೂ ಈ ಹೇಳಿಕೆ ಕೊಟ್ಟಿರುವ ಶ್ರೀಯುತರೇ. ಇದರಿಂದ ಕೆರೆಯೆಲ್ಲ ಹೂಳು ತುಂಬಿ ಮುಚ್ಚಿ ಹೋಗುತ್ತಿದೆ. ಅದರ ಬಗ್ಗೆ ಇವರಿಗೆ ಕಾಳಜಿ ಏಕಿಲ್ಲ?

ಹೀಗೆ ಕೆರೆ ತುಂಬಿ ಹೋಗುತ್ತಿರುವುದರಿಂದ ಮಳೆಗಾಲದಲ್ಲಿ ಕೋಡಿಯಲ್ಲಿ ಹೋಗುವ ನೀರು ತೀರಾ ಹೆಚ್ಚಿದೆ. ಸಾಲದ್ದಕ್ಕೆ ತೂಬುಗಳನ್ನೂ ಮುಚ್ಚಿಸಿ, ಈವರೆಗೆ ಬ[…]ದಾದರೂ ತೂಬಿನಿಂದ ಹೊರಕ್ಕೆ ಹೋಗುತ್ತಿದ್ದ ನೀರೂ ಕೂಡ ಕೋಡಿಯಲ್ಲೇ ಹೋಗತೊಡಗಿದರೆ, ಅದರ ಕೆಳ ಭಾಗದ ಹತ್ತಾರು ರೈತರ ಜಮೀನುಗಳು ಕೊಚ್ಚಿ ಹೋಗುತ್ತವೆ. ಆಗ ಅವರು "ಹಾಗಾದರೆ ಕೋಡಿಯನ್ನೂ ಮುಚ್ಚಿಸಿ ಬಿಡಿ" ಎಂದು ಆ[…]ಹಿಸಿ ಮುಚ್ಚಿಸಬೇಕಾಗುತ್ತದೆ.

ಈಗಾಗಲೇ ಅವರುಗಳು ಶಾಸಕರಿಗೆ [..] ರೀತಿ ಎರಡರಲ್ಲೊಂದು ಕೆಲಸ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ. ತೂಬು ಬೇಡವೆಂದು, ಕೋಡಿಯೂ ಬೇಡವೆಂದು ಎರಡನ್ನೂ ಮುಚ್ಚಿಬಿಟ್ಟರೆ, ಆಗ ಕೆರೆ ಏ[…]ಗುತ್ತದೆ !? ಆಗ ಜಾನುವಾರುಗಳು, ಬಾ[ವಿ]ಯ ಸೆಲೆ ಎಲ್ಲ ಎಲ್ಲಿಗೆ ಹೋಗುತ್ತವೆ? "ತೂಬು ಸರಿಪಡಿಸಿದರೂ ಪುನಃ ಯಾ[…]ದರೂ ಹೀಗೇ ಮುಚ್ಚುವುದಿಲ್ಲ ಎಂಬ [..]ವಸೆಯೇನೂ ಇಲ್ಲ" ಎಂಬುದಾಗಿ ಬು[ಡ]ಮೇಲು ಕೃತ್ಯದ (ಪುನಃ ತೂಬಿಗೆ ಬೆ[ಣೆ] ಹೊಡೆಯುವ) ಬೆದರಿಕೆ ಹಾಕುವವರು ಮೇಲಿನ ಪರಿಸ್ಥಿತಿಯ ಬಗೆಗೂ ಮೊದ[ಲು] ಯೋಚಿಸಿ ಹೆಜ್ಜೆ ಇಡುವುದು ಲೇಸು.

ಇಂಥ ವಿನಾಶಕರ ಕೃತ್ಯಕ್ಕೆ ಪ್ರೋತ್ಸಾಹಿಸುವವರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೂ ಈಗಲೇ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಕೇಳಿದರೆ ಅತಿಯಾಗಲಿಕ್ಕಿಲ್ಲ ಅಲ್ಲವೆ?

—ಎಚ್. ಕೊಲ್ಲಪ್ಪಗೌಡ, ಮಾಜಿ ತಾ.ಅ.ಮಂ. ಸದಸ್ಯ, ಹಾಲ್ಮುತ್ತೂರು.

ಟಿ.ವಿ. ಕ್ವಿಜ್ ಸ್ಪರ್ಧೆಯಲ್ಲಿ ಜಯಪುರ ವಿದ್ಯಾರ್ಥಿ

ಜಯಪುರ: ಬೆಂಗಳೂರಿನಲ್ಲಿ ಜ. 26 ರಂದು ಸಾರ್ವಜನಿಕರಿಗಾಗಿ ನಡೆದ ರಾಜ್ಯ ಮಟ್ಟದ ಟಿ.ವಿ. ರಸಪ್ರಶ್ನೆ ಸ್ಪರ್ಧೆಯಲ್ಲಿ ಜಯಪುರ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿ ಕೃಷ್ಣಮೂರ್ತಿ ಭಾಗವಹಿಸಿದ್ದು, 3 ಜನರ 8 ತಂಡಗಳ ಪೈಕಿ ಈತನ ತಂಡ ಅಂತಿಮ ಸುತ್ತು ಪ್ರವೇಶಿಸಿತ್ತು. ತಂಡದ ಸಹಸ್ಪರ್ಧಿಯೊಬ್ಬನ ತಪ್ಪು ಉತ್ತರದಿಂದಾಗಿ ಕೇವಲ ಒಂದು ಉತ್ತರದಲ್ಲಿ ಪ್ರಶಸ್ತಿ ಸಿಕ್ಕದೆ 2ನೇ ಸ್ಥಾನ ಸಿಕ್ಕಿತು. (ಬಹುಮಾನವಿಲ್ಲ.)

ಜಯಪುರ ಕ ವಿ.ಮಂ. ಉದ್ಯೋಗಿ ರಾಮೇಗೌಡರ ಮಗನಾದ ಈತ ಶಾಲೆಯ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದಾನೆ. (ವರದಿ : ಶಂ ನ. ಶೇಷಗಿರಿ)

ಕಾನ್ವೆಂಟ್‌ಗೆ ಸಂಬಾರಮಂಡಳಿ 15,000 ರೂ. ನೆರವು

ಕೊಪ್ಪ : ಇಲ್ಲಿನ ಕಾನ್ವೆಂಟ್ ಪ್ರೌಢ ಶಾಲೆಗೆ ಪ್ರಯೋಗಾಲಯ ಸೌಕರ್ಯ, ಪೀಠೋಪಕರಣ ಮತ್ತು ಕುಡಿವ ನೀರಿನ ಸೌಕರ್ಯಕ್ಕಾಗಿ ಸಂಬಾರ ಮಂಡಳಿಯಿಂದ 15 ಸಾವಿರ ರೂ. ಮಂಜೂರಾಗಿದ್ದು, ಫೆ. 15 ರಂದು ಎಚ್. ಜಿ. ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಡಳಿ ಸಹ ನಿರ್ದೇಶಕ ಆರ್. ಚಂದ್ರಶೇಖರ್ ಮುಖ್ಯೋಪಾಧ್ಯಾಯಿನಿಯವರಿಗೆ ಚೆಕ್ ನೀಡಿದರು. ಜಿ. ಪ ಸದಸ್ಯೆ ಸುಮಿತ್ರಮ್ಮ, ಮಂಡಳಿಯ ಕೊಪ್ಪ ಕ್ಷೇತ್ರಾಧಿಕಾರಿ ಶೇಖರಪ್ಪ ಅತಿಥಿಗಳಾಗಿದ್ದರು.

ಆಕಾಶವಾಣಿ ಬಹುಮಾನ

ಕೊಪ್ಪ: ಭದ್ರಾವತಿ ಆಕಾಶವಾಣಿಯು ಕೃಷಿ ಇಲಾಖೆ ಮತ್ತು ಕೃಷಿ ವಿ.ವಿ. ಜೊತೆಗೆ ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಿಗಾಗಿ ನಡೆಸಿದ ಸಸ್ಯ ಸಂರಕ್ಷಣೆ ಕುರಿತ ಬಾನುಲಿ ಪಾಠ ಮತ್ತು ಪರೀಕ್ಷೆಯಲ್ಲಿ ಇಲ್ಲಿನ ಕೃಷಿಯ ಕಾಲೇಜು ಸಸ್ಯ ಶಾಸ್ತ್ರ ಉಪನ್ಯಾಸಕಿ ಬಿ. ಎ ನಾಗರತ್ನ 2ನೇ ಬಹುಮಾನ ಗಳಿಸಿದ್ದಾರೆ. ಶೃಂಗೇರಿ ಮತ್ತು ನ.ರಾ. ಪುರದ ಇಬ್ಬರು ಸ್ಪರ್ಧಿಗಳು ಸಮಾಧಾನ ಬಹುಮಾನಗಳನ್ನು ಪಡೆದಿದ್ದಾರೆ.

ನೂತನ ಯುವಕ ಮಂಡಲ

ಶೃಂಗೇರಿ : ಈ ತಾಲ್ಲೂಕಿನ ಬೆಟ್ಟಗೆರೆ ಗ್ರಾಮದಲ್ಲಿ ಇಚೆಗೆ ನೂತನವಾಗಿ ರಚಿತವಾದ ಸಂತೋಷ್ ಯುವಕ ಸಂಘದ ಪದಾಧಿಕಾರಿಗಳು : ತಮ್ಮಣ್ಣಹೆಗ್ಡೆ (ಅಧ್ಯಕ್ಷರು), ಎ. ಜಿ. ವೆಂಕಟೇಶ್ (ಉಪಾಧ್ಯಕ್ಷರು), ಕೆ. ಎಸ್. ವೆಂಕಪ್ಪ (ಕಾರ್ಯದರ್ಶಿ), ಕೆ. ಎಸ್ ಚಂದ್ರಶೇಖರ್ (ಸಹ ಕಾರ್ಯದರ್ಶಿ), ಸುರೇಂದ್ರ ಹೆಗ್ಡೆ (ಖಜಾಂಚಿ) ಹಾಗೂ ಮನರಂಜನೆ, ಸಮಾಜಸೇವೆ ಮತ್ತು ಕ್ರೀಡಾ ವಿಭಾಗಗಳಿಗೆ ತಲಾ ಇಬ್ಬರು ಕಾರ್ಯದರ್ಶಿಗಳು.

ಕರಾಟೆ ತರಗತಿ ಆರಂಭ

ಕೊಪ್ಪ : ಮಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ಕರಾಟೆ ಅಂಡ್ ಅಲೈಡ್ ಆರ್ಟ್ಸ್ ಸಂಸ್ಥೆಯ ಆಶ್ರಯದಲ್ಲಿ ಇಲ್ಲಿ ನೂತನವಾಗಿ ಆರಂಭವಾದ ಕರಾಟೆ ತರಗತಿಯನ್ನು ಫೆ. 8 ರಂದು ಕೆ. ವಿ. ಮಂಜುನಾಥ ಶೆಟ್ಟಿ ಅಧ್ಯಕ್ಷತೆಯಲ್ಲಿ ಗ್ರೆಗೋರಿ ಡಯಾಸ್ ಉದ್ಘಾಟಿಸಿದರು. ಎಲ್. ಕಲಾಸೋ ಮತ್ತು ಪಿ. ಬಿ. ಆದಿತ್ಯ ಮುಖ್ಯ ಅತಿಥಿಗಳಾಗಿದ್ದರು.

ಮುಖ್ಯ ಶಿಕ್ಷಕರಾದ ಮಂಗಳೂರಿನ ಪ್ರವೀಣ್ ಕುಮಾರ್ ಭಾಗವಹಿಸಿದ್ದು, ಫೆ. 9 ರಂದು ತರಗತಿ ನಡೆಸಿದರು. ಗೋಪಿನಾಥ ಪ್ರಭು ಸಂಚಾಲಕರಾಗಿದ್ದಾರೆ.

ಶೃಂಗೇರಿ ಕಾಲೇಜು ಎನ್ನೆಸ್ಸೆಸ್ 'ಅತ್ಯುತ್ತಮ ಘಟಕ'

ಶೃಂಗೇರಿ: ಕುವೆಂಪು ವಿ.ವಿ. ವ್ಯಾಪ್ತಿಯ ಎನ್.ಎಸ್.ಎಸ್. ಘಟಕಗಳ ಪೈಕಿ ಜೆ. ಸಿ ಬಿ ಎಂ ಕಾಲೇಜಿನ ಎನ್.ಎಸ್.ಎಸ್. ಘಟಕಗಳನ್ನು ಅತ್ಯುತ್ತಮ ಘಟಕಗಳೆಂದು ಪರಿಗಣಿಸಿ, ಇಚೆಗೆ ಕುಂದಾಪುರದಲ್ಲಿ ನಡೆದ ರಾಜ್ಯ ಮಟ್ಟದ ಎನ್. ಎಸ್. ಎಸ್. ಉತ್ಸವದಲ್ಲಿ ಪ್ರಶಸ್ತಿ ಹಾಗೂ ಪಾರಿತೋಷಕವನ್ನು ನೀಡಲಾಗಿದೆ.

ದೇಣಿಗೆಗೆ ಮನವಿ

ಕೊಪ್ಪದ ಮೇಲಿನ ಪೇಟೆಯ ಶಿವಾಲಯದಲ್ಲಿ ಫೆ. 23 ರಂದು ಮಹಾ ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿವೆ.

ಶಿವಾಲಯದ ಸುತ್ತ ಹಾಸುಗಲ್ಲು ಮತ್ತು ಮೇಲ್ಛಾವಣಿ ನಿರ್ಮಾಣಕ್ಕೆ ದಾನಿಗಳು ಉದಾರವಾಗಿ ದೇಣಿಗೆ ನೀಡಬೇಕೆಂದು ದೇವಾಲಯದ ಕನ್ವೀನರ್ ವಿನಂತಿಸಿದ್ದಾರೆ.

ಅಡಿಕೆ ಧಾರಣೆ

ಶಿವಮೊಗ್ಗ : 16-2-1990
ಸರಕು : 3509-3886
ಬೆಟ್ಟೆ : 2469-2862
ಗೊರಬಲು : 1789-1860

ಬಿಳಿಕ್ಕಿ

ಕೊಪ್ಪ : 16-2-1990
ರಾಶಿ : ಸಾಧಾರಣ : 260-28[.]
ಉತ್ತಮ : 280-300
ಜಡಿ : 310-330
ಹೆಕ್ಕಿದ್ದು : 380-400

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ, ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.